ಕರ್ನಾಟಕ ಸರ್ಕಾರ

ಸಂಖ್ಯೆ : ನಅಇ 316 ಬೆಂಅಸೇ 97

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.
ದಿನಾಂಕ : 13.11.1996

ಇಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಇವರಿಗೆ
ಅಧ್ಯಕ್ಷರು
ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ಬೆಂಗಳೂರು.

ವಿಷಯ : ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರದೇಶದಲ್ಲಿ ಶುಲ್ಕಗಳನ್ನು ವಿಧಿಸುವ ಬಗ್ಗೆ

ಉಲ್ಲೇಖ : ತಮ್ಮ ಪತ್ರ ಸಂಖ್ಯೆ : ಬೆಂಅಂವಿಪ್ರಯೋಪ್ರಾ : ಟಿಪಿ : ಸು ಶುಲ್ಕ : 1 : 97-98 ದಿನಾಂಕ 5.8.1997

ಮೇಲ್ಕಂಡ ವಿಷಯದಲ್ಲಿ ದಿನಾಂಕ 4.11.97 ರಂದು ನಡೆದ ಸಭೆಯ ನಡವಳಿಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಸದರಿ ಸಭೆಯಲ್ಲಿ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರದೇಶಕ್ಕೆ ಇನ್ನೂ ವ್ಯಾಪಕಾಭಿವೃದ್ಧಿ ಯೋಜನೆಯು ತಯಾರಾಗಿರುವುದಿಲ್ಲವೆಂಬುದನ್ನು ಮನಗಂಡು, ಸದ್ಯಕ್ಕೆ ವಿನ್ಯಾಸ ನಕ್ಷೆಗಳನ್ನು ಅನುಮೋದಿಸಿರುವ ಸಂದರ್ಭದಲ್ಲಿ ಅಭಿವೃದ್ಧಿದಾರರಿಂದ ರಸ್ತೆ ಶುಲ್ಕವನ್ನು ಕಟ್ಟಿಸಿಕೊಳ್ಳುವುದು ಬೇಡವೆಂದು ತೀರ್ಮಾನಿಸಲಾಗಿದೆ. ಇಂತಹ ಶುಲ್ಕವನ್ನು ಪ್ರಾರಂಭಿಕ ಪ್ರಮಾಣ ಪತ್ರ ನೀಡುವಾಗ ಫಲಾನುಭವಿಗಳಿಂದ ವಸೂಲು ಮಾಡಬಹುದು ಎಂದು ಸಹ ತೀರ್ಮಾನಿಸಿದೆ.

ಈ ಹಿನ್ನಲೆಯಲ್ಲಿ ದಿನಾಂಕ 4.11.1997 ರಂದು ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ ಮುಂದಿನ ಕ್ರಮಕ್ಕೆ ಕೈಗೊಳ್ಳುವಂತೆ ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ನಿಮ್ಮ ವಿಶ್ವಾಸಿ

sd/-
(ಸಿದ್ಧರಾಮಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ